# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 453/2026

ಸಿ.ಡಬ್ಲ್ಯು 1

ಪಿ.ಡಬ್ಲ್ಯು 1

| | | |
|---|---|---|
| ಸಾಕ್ಷಿದಾರರ ಹೆಸರು | – | ಭಾರತಿ ನಾಯ್ಕ |
| ತಂದೆಯ ಹೆಸರು | – | ಅರುಣ |
| ವಯಸ್ಸು | – | 52 ವರ್ಷ |
| ಉದ್ಯೋಗ | – | ಹೊಲಿಗೆ ಕೆಲಸ |
| ವಾಸ್ತವ್ಯ | – | ಕಾರವಾರ |

(ಇಂದು ದಿನಾಂಕಃ 10-08-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ಆರೋಪಿತರ ಪರಿಚಯ ಇದೆ. 02-11-2025 ರಂದು ಮಧ್ಯಾಹ್ನ 12-30 ಗಂಟೆಗೆ ತುಳಸಿ ಹಬ್ಬ ಇರುವುದರಿಂದ ಹೂ ತರಲು ಹೋಗಿದ್ದೆ. ನನ್ನ ಜೊತೆ ಚಾಸಾ 4 ರವರು ಇದ್ದರು. ನಾವು ಮರಳಿ ಬರುತ್ತಿದ್ದಾಗ ಸಂಕ್ರಿವಾಡಾದ ಮೊದಲನೇ ಕ್ರಾಸ್ ನಲ್ಲಿ ನಡೆದುಕೊಂಡು ಬರುತ್ತಿದ್ದಾಗ ಆಗ ಆರೋಪಿ ತನ್ನ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದು ಬ್ರೇಕ್ ಹಾಕಿ ನಿಲ್ಲಿಸಿದ್ದಾರೆ . ನಮಗೆ ಕೆಟ್ಟ ಮಾತುಗಳಿಂದ ಬೈದಿದ್ದಾರೆ. ನನಗೆ ಬೇವರ್ಸಿ ರಂಡೆ ಎಂದು, ನಿಮ್ಮನ್ನು ಬಿಡುವುದಿಲ್ಲ ಎಂದು ಹೇಳಿದ್ದಾನೆ. ನಿನ್ನ ಗಂಡನನ್ನು ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದಾನೆ. ನಂತರ ನಾವು ಮನೆಗೆ ಹೋಗಿದ್ದೇವೆ. ಮನೆಯಲ್ಲಿ ವಿಷಯವನ್ನು ತಿಳಿಸಿದ್ದೇನೆ. ಅದೇ ದಿನ ಪೋಲಿಸ್ ಠಾಣೆಗೆ ಹೋಗಿ ಪ್ರಥಮ ವರ್ತಮಾನ ಹೇಳಿಕೆ ನೀಡಿದ್ದೇನೆ. ನಂತರ ಪೋಲಿಸರು ನ್ಯಾಯಾಲಯದಿಂದ ತನಿಖೆಗೆ ಆದೇಶ ಪಡೆದುಕೊಂಡು ಬರಲು ತಿಳಿಸಿದ್ದರಿಂದ ನ್ಯಾಯಾಲಯಕ್ಕೆ ಬಂದು ಆದೇಶ ಪಡೆದುಕೊಂಡು ದಿನಾಂಕ 11-11-2025 ರಂದು

ಪಡೆದುಕೊಂಡು ಪೋಲಿಸರಿಗೆ ಕೊಟ್ಟಿದ್ದೇವೆ. ಪ್ರಥಮ ವರ್ತಮಾನ ಹೇಳಿಕೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿನಾಂಕ 11-11-2025 ರಂದು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಪೋಲಿಸರು ಸ್ಥಳಕ್ಕೆ ಬಂದಿದ್ದಾರೆ. ಸ್ಥಳವನ್ನು ನಾನೇ ತೋರಿಸಿದ್ದೇನೆ. ಚಾಸಾ 2 ಮತ್ತು 3 ರವರ ಸಮಕ್ಷಮದಲ್ಲಿ ಮಹಜರ ಮಾಡಿದ್ದಾರೆ ಮತ್ತು ಸಹಿ ತೆಗೆದುಕೊಂಡಿದ್ದಾರೆ. ಸ್ಥಳದಲ್ಲಿ ವಿಡಿಯೋ ಮಾಡಿಕೊಂಡಿದ್ದಾರೆ. ಮಹಜರ ಮೇಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕ್ಷೆ ಮೇಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು , ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಭಾವ ಚಿತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಬೆದರಿಕೆ ಹಾಕಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ವಾಯ್ ಎಸ್ ವಕೀಲರಿಂದಃ**

ನನ್ನ ಮನೆ ಮತ್ತು ಚಾಸಾ 4 ರ ಮನೆ ಬೇರೆ ಬೇರೆ ಎಂದರೆ ಸರಿ . ನಮ್ಮ ಮನೆಗೆ ಹೋಗಲು ಒಂದು ಗೇಟು ಮತ್ತು ಚಾಸಾ 4 ರ ಮನೆಗೆ ಹೋಗಲು ಬೇರೆ ಗೇಟ್ ಇದೆ ಎಂದರೆ ಸರಿ. ನಮ್ಮ ಮನೆಯ ಮುಂದೆ ರಸ್ತೆ ಪೂರ್ವ ಪಶ್ಚಿಮವಾಗಿ ಇದೆ ಎಂದರೆ ಸರಿ. ರಸ್ತೆಯ ಉತ್ತರ ಬದಿಗೆ ನನ್ನ ಮನೆ ಇದೆ ಎಂದರೆ ಸರಿ . ಆರೋಪಿ ಮನೆ ನಮ್ಮ ಮನೆಯಿಂದ ಸುಮಾರು 50 ಅಡಿ ದೂರದಲ್ಲಿ ಇದೆ ಎಂದರೆ ಸಾಕ್ಷಿ 2-3 ಮನೆ ಬಿಟ್ಟು ಇದೆ ಎಂದು ಹೇಳುತ್ತಾರೆ. ಆರೋಪಿ ತನ್ನ ಮನೆಗೆ ಕಂಪೌಂಡಿಗೆ ಕಬ್ಬಿಣದ ಗೇಟನ್ನು ಹಾಕಿದ್ದಾನೆ ಎಂದರೆ ಸರಿ . ಆರೋಪಿ ತನ್ನ ಮನೆಯ ಮುಂದೆ ಆಗು ಹೋಗುಗಳಿಗೆ ಸಂಬಂಧಪಟ್ಟ ಘಟನೆಗಳನ್ನು ಸೆರೆ ಹಿಡಿಯಲು ಆರೋಪಿ ತನ್ನ ಮನೆಯ ಮೊದಲನೇ ಮಹಡಿಯಲ್ಲಿ ಸಿಸಿ ಕ್ಯಾಮರಾ ಹಾಕಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಮನೆ ನಮ್ಮ ಮನೆಯ ಪಶ್ಚಿಮಕ್ಕೆ ಇದೆ ಎಂದರೆ ಸರಿ. ಘಟನೆ ಸುಮಾರು 5-6 ನಿಮೀಷ ನಡೆದಿದೆ. ಘಟನೆ ನಡೆದಿದೆ ಎಂದು ಹೇಳಲಾದ ಸಮಯದಲ್ಲಿ

ಸುಮಾರು 5-6 ಜನ ಸೇರಿದ್ದರು. ಆರೋಪಿಯ ದ್ವಿಚಕ್ರ ವಾಹನದ ಸಂಖ್ಯೆಯನ್ನು ನಾನು ನೋಡಿಲ್ಲ. ಆ ದಿನ ಆರೋಪಿ ದಕ್ಷಿಣ ದಿಕ್ಕಿನಿಂದ ಬಂದಿದ್ದಾರೆ. ಆರೋಪಿ ಅದೇ ದಿಕ್ಕಿನಲ್ಲಿ ಮುಂದೆ ಹೋಗಿದ್ದಾರೆ. ಘಟನೆ ನಡೆಯಲಾದ ಸಮಯದಲ್ಲಿ ನನ್ನ ಮನೆಯಲ್ಲಿ ನನ್ನ ಗಂಡ, ಅತ್ತೆ , ಗಂಡನ ಅಣ್ಣ ತಮ್ಮಂದಿರು ಮತ್ತು ಮಕ್ಕಳು ಇದ್ದರು. ಸದರಿಯವರು ಮನೆಯ ಒಳಗಡೆ ಇದ್ದರು ಎಂದು ಪೋಲಿಸರ ಮುಂದೆ ಹೇಳಿಲ್ಲ. ಆರೋಪಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಸುಸಂಸ್ಕೃತ ಕುಟುಂಬಕ್ಕೆ ಸೇರಿದವರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 02-11-2025 ರಂದು ಆರೋಪಿ ದ್ವಿಚಕ್ರ ವಾಹನದ ಮೇಲಿಂದ ಬಂದು ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 24-10-2025 ರಂದು ನನ್ನ ಗಂಡ ಮತ್ತು ಚಾಸಾ 4 ರವರ ಗಂಡ ಆರೋಪಿಗೆ ಹೊಡೆದಿದ್ದು , ಸದರಿಯವರು ನನ್ನ ಗಂಡ ಮತ್ತು ಚಾಸಾ 4 ರ ಗಂಡನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಳ್ಳು ಕೇಸನ್ನು ದಾಖಲಿಸಿದ್ದಾರೆ ಎಂದು ಹೇಳುತ್ತಾರೆ . ಆ ವೈಮನಸ್ಸಿನಿಂದ ಸುಳ್ಳು ಪ್ರಥಮ ವರ್ತಮಾನ ಹೇಳಿಕೆ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಮೇಲೆ ಮಾನಹಾನಿ ಪರಿಹಾರ ಕೇಳಿ ಓ ಎಸ್ ನಂ. 178/2025 ರಂತೆ ಸಿವಿಲ್ ದಾವೆ ಹಾಕಿದ್ದಾರೆ ಎಂದರೆ ಸರಿ . ಪಂಚನಾಮೆ ಸ್ಥಳವನ್ನು ಪೋಲಿಸರಿಗೆ ತೋರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 02-11-2025 ರಂದು ಯಾವುದೇ ಗಲಾಟೆ ನಡೆದಿಲ್ಲ ಅನ್ನುವುದು ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಪ್ರಥಮ ವರ್ತಮಾನ ಹೇಳಿಕೆ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

C.W.1 , P.W. 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ